**ಓ ಎಸ್ ನಂಃ 52/2025**
**ಪಿ.ಡಬ್ಲ್ಯೂ -4**
**ದಿನಾಂಕಃ 20.01.2026**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿಯರ ಪರವಾಗಿ ಶ್ರೀ ಎನ್ ಜಿ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿರುವ ಅಂಶವನ್ನು ನಾನೇ ಹೇಳಿ ಬರೆಸಿ ಸಹಿ ಹಾಕಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ. ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ.

ಸಾಕ್ಷಿಯು ನಿಪಿ1 ಮತ್ತು ಅದರ ಮೇಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಎ) ಮತ್ತು ನಿಪಿ-1(ಬಿ) ಎಂದು ಗುರುತಿಸಲಾಯಿತು . ಸದರಿ ನಿಪಿ-1 ಕ್ಕೆ ಸಿದ್ದರಾಮಪ್ಪ ನವರು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ಸದರಿ ಪತ್ರವನ್ನು ಗಂಗಾಧರ್ ರವರು ಬರೆದಿರುತ್ತಾರೆ . ಸಾಕ್ಷಿದಾರರಾಗಿ ಲಕ್ಷ್ಮಿಕಾಂತ್ ಮತ್ತು ಪರಮೇಶ್ವರಪ್ಪ ನವರು ಇದ್ದು , ಲಕ್ಷ್ಮಿ ಕಾಂತ್ ರವರು ಸಹಿ ಹಾಕಿರುತ್ತಾರೆ.

**ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.

**ಓ ಎಸ್ ನಂಃ 52/2025**
**ಪಿ.ಡಬ್ಲ್ಯೂ -5**
**ದಿನಾಂಕಃ 20.01.2026**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ವಾದಿಯರ ಪರವಾಗಿ ಶ್ರೀ ಎನ್ ಜಿ ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿರುವ ಅಂಶವನ್ನು ನಾನೇ ಹೇಳಿ ಬರೆಸಿ ಸಹಿ ಹಾಕಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ. ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ.

ಸಾಕ್ಷಿಯು ನಿಪಿ-1 ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ದಾಖಲಾತಿಯನ್ನು ನಾನು ದಿಃ 28.09.2023 ರಂದು ಮಾಡಿರುತ್ತೇನೆ ಮತ್ತು ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಸಾಕ್ಷಿದಾರರಾಗಿ ಮುನೀಶ್ವರ ಸ್ವಾಮಿ , ಲಕ್ಷ್ಮಿ ಕಾಂತ್ , ಜ್ಞಾನೇಶ್ ರವರು ಇದ್ದು ಸಹಿ ಹಾಕಿರುತ್ತಾರೆ. ಸಿದ್ದರಾಮಪ್ಪ ನವರು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ , ಉಳಿದವರು ಸಹಿ ಹಾಕಿರುತ್ತಾರೆ. ಅವರ ಸಹಿಯನ್ನು ನೋಡಿದರೆ ಗುರುತಿಸಬಹುದು. ನಂತರ ದಿಃ 04.11.2015 ರಂದು ಸಿದ್ದರಾಮಪ್ಪ ನವರಮರಣಾನಂತರ ಅವರ ವಾರಸುದಾರರು ಒಪ್ಪಿಗೆ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ . ಸದರಿ ಒಪ್ಪಿಗೆ ಕರಾರು ಪತ್ರದ ಬಿಕ್ಲಂ ನಾನೇ ಅಗಿದ್ದು, ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಹೆಚ್) ಎಂದು ಗುರುತಿಸಲಾಯಿತು ಮತ್ತು ವಾರಸುದಾರರುಗಳ ಸಹಿ ನೋಡಿದರೆ ಗುರುತಿಸಬಹುದು. ಸದರಿ ನಿಪಿ-2 ಕ್ಕೆ ತಿಮ್ಮಣ್ಣ ಸಹಿ ಹಾಕಿರುತ್ತಾರೆ. ದಿಃ 26.05.2016 ರಂದು ಕ್ರಯ ಒಪ್ಪಂದದ ಕರಾರಿನ ಷರಾ ಪತ್ರವನ್ನು ಬರೆಯಲಾಯಿತು. ಸದರಿ ಪತ್ರದ ಬಿಕ್ಲಂ ನಾನೇ ಆಗಿರುತ್ತೇನೆ. ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4(ಜೆ) ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ಸಿದ್ದರಾಮಪ್ಪನ ವಾರಸುದಾರರು ಸಹಿ ಹಾಕಿರುತ್ತಾರೆ. ಅವರುಗಳ ಸಹಿ ನೋಡಿದರೆ ಗುರುತಿಸುತ್ತೇನೆ. ಸದರಿ ಪತ್ರಕ್ಕೆ ಸಾಕ್ಷಿದಾರಾಗಿ ತಿಮ್ಮಣ್ಣ , ರಂಗಪ್ಪ , ಶಂಕರಪ್ಪ

ಮತ್ತು ಲೇಪಾಕ್ಷಿ ಸಾಕ್ಷಿದಾರರಾಗಿ ಸಹಿಹಾಕಿರುತ್ತಾರೆ . ಅವರ ಸಹಿ ನೋಡಿದರೆ ಗುರುತಿಸುತ್ತೇನೆ.

**ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.